ಹಣ್ಣು, ಎಲೆ, ನೀರು, ನೆರಳು, ಹಕ್ಕೆ ಇರುವ ನೈಸರ್ಗಿಕ ವ್ಯವಸ್ಥೆಯಾಗಿದೆ.

ಶರಾವತಿ ಕಣಿವೆ ನಿಸರ್ಗ ರಚಿಸಿದ ಒಂದು 'ಸಜೀವ ಮ್ಯೂಸಿಯಂ'. ಇಲ್ಲಿ ಮರಗಳನ್ನು ಸಹಸ್ರ ಬಾಹುಗಳಿಂದ ಬಿಗಿದಪ್ಪಿರುವ ವಿವಿಧ ಜಾತಿಯ ಅಂಬುಗಳು, ಹಕ್ಕಿಗಳಿಗೂ ಕೆಂದಳಿಲಿಗೂ ಕೋತಿಗಳಿಗೂ ಹಾಕಿಕೊಟ್ಟ ಉಯ್ಯಾಲೆಯಾಗಿವೆ; ಬೆತ್ತದಸರಗಳು ದೊಡ್ಡಮರಗಳಿಗೆ ಲಗತ್ತಾಗಿ ನೂರಾರು ಅಡಿ ನಿಮಿರಿ ಬೆಳೆದಿವೆ; ನಡುನಡುವೆ ಗೊಮ್ಮಟನಂತೆ ನಿಂತ ಬಗಿನೆಮರಗಳು ಮಾರುದ್ದನೆಯ ಗೊಂಚಲನ್ನು ತಳೆದು ಸ್ವತಂತ್ರ ನಿಂತಿವೆ; ಧಾರಾಕಾರ ವರ್ಷದ ಪರಿಣಾಮ, ಆರತಕ್ಷತೆ ಮಂಟಪ ಸಿಂಗರಿಸಿದಂತೆ, ಶಾವಿಗೆ ಒಣಗಲು ಹಾಕಿದಂತೆ, ಚಳಿತಡೆಯಲು ಹೊದೆಸಿದ ಕಂಬಳಿಯಂತೆ, ಮರಗಿಡಗಳ ಮೇಲೆ ಜೂಲುಜೂಲಾಗಿ ಹಾವಸೆ ಇಳಿಬಿದ್ದಿದೆ; ಮರದ ಕಾಂಡಗಳ ಮೇಲೆ ವಿವಿಧ ದೇಶಗಳ ಭೂಪಟಗಳನ್ನು ರಚಿಸಿದಂತೆ ಫಂಗಸ್ ಜಾತಿಯ ಕಲ್ಲುಹೂ ಅರಳಿವೆ; ಮರಗಳು ಬಿದ್ದು ಲಡ್ಡಾಗಿ ಕೊಳೆತು ಮಣ್ಣಾಗುತ್ತ, ಅವುಗಳ ಮೇಲೆ ಬೆಳೆದಿರುವ ಅಣಬೆಗಳು, ಮರಣದ ಜೊತೆಯಲ್ಲೇ ಮತ್ತೊಂದರ ಹುಟ್ಟು ಸಂಭವಿಸುವ ಆಟವನ್ನು ಆಡುತ್ತಿವೆ. ಅಣಬೆ, ಆರ್ಕಿಡ್ಡು, ಹಾವಸೆ, ಕಲ್ಲುಹೂವು, ಬಳ್ಳಿ – ಇವೆಲ್ಲ ಪರಾವಲಂಬಿ ಶೋಷಕರಂತೆ ಭಾಸವಾಗುತ್ತವೆ. ಆದರೆ ತಮಗಾಶ್ರಯ ಕೊಟ್ಟ ಮರಗಳ ಜೊತೆಗೆ ಅವಕ್ಕೆ ಯಾವೆಲ್ಲ ಆಪ್ತ ನಂಟಸ್ತಿಕೆಯಿದೆಯೊ? ಯಾತಕ್ಕೂ ನಮ್ಮ ದೃಷ್ಟಿಕೋನ ಮತ್ತು ಪರಿಭಾಷೆ ಬದಲಿಸಿಕೊಳ್ಳಬೇಕು. ಬಿಳಿಗಿರಿ ರಂಗನಬೆಟ್ಟದಲ್ಲಿ ಒಂದು ಗಿಡದ ಮೇಲೆ ಇನ್ನೊಂದು ಗಿಡ ಬೆಳೆದಿರುವುದನ್ನು ಕಂಡು ಸೋಲಿಗರ ಹೆಣ್ಣುಮಗಳು ಬಣ್ಣಿಸಿದಳಂತೆ: 'ದೊಡ್ಡಗಿಡ ಸಣ್ಣಗಿಡಾನ ತನ್ನ ಕೂಸು ಅಂತ ಸೊಂಟದಲ್ಲಿ ಇಟ್ಕೊಂಡೈತೆ'.

ಶರಾವತಿ ಕಣಿವೆಯ ಕಾಡಲ್ಲಿ ಎದ್ದುಕಂಡಿದ್ದು ಹಲವು ಬಣ್ಣಗಳು. ಹಸಿರಿನಲ್ಲೇ ಕಪ್ಪು ಗಿಳಿಹಸಿರು; ಚಿಗುರಿನ ಕೆಂಪುತನದಲ್ಲೇ ಕಡು–ತಿಳಿ ವರ್ಣಗಳು. ಬಸವನಪಾದದ ಎಲೆಗಳಿದ್ದ ಗಿಡದ ಚಿಗುರಂತೂ ರಕ್ತರಂಜಿತವಾಗಿತ್ತು. ಹಣ್ಣಾಗಿ ಕೆಳಗೆಬಿದ್ದ ಎಲೆಗಳಲ್ಲೇ ಎಷ್ಟೊಂದು ಪೀತವರ್ಣ? ಕೆಲವೆಡೆ ಹೊನ್ನಿನ ತಗಡುಗಳನ್ನು ಮರದಡಿ ಚೆಲ್ಲಾಡಿದಂತೆ ಅವು ಬಿದ್ದಿದ್ದವು. ಹಚ್ಚನೆಯ ವನದಲ್ಲಿ ಬಿಳಿಸೀರೆ ಒಣಹಾಕಿದಂತೆ ತಟ್ಟನೆ ಎದುರಾಗುವ ಜಲಪಾತಗಳ ಬಣ್ಣವೇ ಬೇರೆ; ಮೈತುಂಬ ಚಿತ್ರಬಿಡಿಸಿಕೊಂಡ ಹಾವು ಕೀಟಗಳು; ಗೇಣುದ್ದ ಹುಡುಗಿ ಮಾರುದ್ದದ ಹೂಮುಡಿದಂತೆ ಸೀತಾಳೆದಂಡೆ. ನಿಸರ್ಗ ಕಾಣಿಸುವ ವರ್ಣಬಹುತ್ವಕ್ಕೆ ಸಾಟಿಯಿಲ್ಲ.

ನಾವೊಂದು ರಾತ್ರಿ ಮುಪ್ಪಾನೆಯಲ್ಲಿ ಶರಾವತಿ ಡ್ಯಾಮಿನ ಹಿನ್ನೀರ ದಡದಲ್ಲಿ ಮಲಗಿದ್ದೆವು. ಮರಗಳು, ಕವಿದ ಮಂಜಲ್ಲಿ ರಾತ್ರಿಯಿಡೀ ತೋಯುತ್ತ ಎಲೆಗಳ ಮೇಲೆ ಸಂಗ್ರಹಿಸಿದ ನೀರನ್ನು ತೊಟ್ಟುತೊಟ್ಟಾಗಿ ಟೆಂಟಿನ ಮೇಲೆ ಹನಿಸುತ್ತ ಜಲತರಂಗ ನುಡಿಸಿದವು. ನಿರ್ಜನ ಕಾಡಲ್ಲಿ ಕಲ್ಲುನೀರು ಕರಗುವ ರಾತ್ರಿಯಲ್ಲಿ ನಿಶ್ಶಬ್ದವೆಂತೆಂದರೆ, ದೂರದಲ್ಲೆಲ್ಲೊ


ಸರಳಾ ಹೊಳೆ


ಶಿಲಾತಪಸ್ವಿ!



